**ದಿನಾಂಕ 17.08.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಆರ್.ಕೆ. ವಕೀಲರಿಂದಃ**

1. ದಿನಾಂಕ 06.11.2006 ರಂದು ನನ್ನ ತಾಯಿ ತಿಮ್ಮಕ್ಕನವರು ವಾದಿಗಳು ಮತ್ತು 1 ನೇ ಪ್ರತಿವಾದಿಗೆ ವಿಲ್ ಮಾಡಿದ್ದರು ಎಂದರೆ ಸರಿ. ದಿನಾಂಕ 16.01.2009 ರಲ್ಲಿ ಸದರಿ ವಿಲ್ ನ್ನು ನನ್ನ ತಾಯಿ ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮಾಡಿರುವ ವಿಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಿನಾಂಕ 16.01.2009 ರಂದು ವಿಲ್ ನ್ನು ರದ್ದು ಮಾಡಿದ ನಂತರ 3 ನೇ ಪ್ರತಿವಾದಿಗೆ ದಾವಾ ಐಟಂ ನಂ.2 ರಲ್ಲಿ 1 ಎಕರೆ ಜಮೀನನ್ನು ನನ್ನ ತಾಯಿ ವಿಲ್ ಮುಖಾಂತರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಮತ್ತೊಂದು ವಿಲ್ ಮುಖಾಂತರ 1 ಎಕರೆ ಜಮೀನನ್ನು 3 ನೇ ಪ್ರತಿವಾದಿಗೆ ಮತ್ತು ಉಳಿದ 2 ಎಕರೆ ಜಮೀನನ್ನು 1 ನೇ ಪ್ರತಿವಾದಿಯ ಹೆಂಡತಿ 2 ನೇ ಪ್ರತಿವಾದಿಗೆ ವಿಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ.
2. ಈ ಮೇಲೆ ತಿಳಿಸಿದ ಮೂರು ವಿಲ್ ಗಳನ್ನು ದಿನಾಂಕ 17.01.2009 ರಂದು ನನ್ನ ತಾಯಿ ರದ್ದು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಯಾರಿಗೂ ಅನ್ಯಾಯ ಮಾಡುವುದಿಲ್ಲ ಎಂದು ಎಲ್ಲರಿಗೂ ವಿಲ್ ಮಾಡಿರುತ್ತಾರೆ ಆದರೆ ಅವರು ರದ್ದು ಮಾಡಿರುವ ವಿಚಾರ ನಮ್ಮ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 17.01.2009 3 ನೇ ಪ್ರತಿವಾದಿಗೆ ನನ್ನ ತಾಯಿ ವಿಲ್ ಮುಖಾಂತರ ದಾವಾ ಐಟಂ ನಂ.2 ರಲ್ಲಿ 1 ಎಕರೆ ಜಮೀನನ್ನು ಮರಣ ಪತ್ರ ಮುಖಾಂತರ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 05.02.2011 ರಲ್ಲಿ ನನ್ನ ತಾಯಿ ಪ್ರತಿವಾದಿ 4 ಮತ್ತು 5 ರವರಿಗೆ ದಾವಾ ಐಟಂ ನಂ.2 ರಲ್ಲಿ 2 ಎಕರೆ ಜಮೀನನ್ನು ಮರಣ ಶಾಸನ ಮುಖಾಂತರ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.
3. ನನ್ನ ವಾದ ಪತ್ರದಲ್ಲಿ ಮೇಲೆ ತಿಳಿಸಿರುವ ವಿಚಾರವನ್ನು ನಾನೇ ಪ್ರಸ್ತಾಪ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮರಣ ಶಾಸನವನ್ನು ಬರೆಯ ಸಮಯದಲ್ಲಿ ನನ್ನ ತಾಯಿ 1 ನೇ ಪ್ರತಿವಾದಿಯವರ ಮನೆಯಲ್ಲಿ ವಾಸವಿದ್ದರು ಎಂದರೆ ಸಾಕ್ಷಿಯು ಎಲ್ಲರ ಮನೆಯಲ್ಲೂ ಸ್ವಲ್ಪ

ಕಾಲ ವಾಸವಿರುತ್ತಿದ್ದರು ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿ ನನ್ನ ಬಳಿ ಇಲ್ಲ. ನಮ್ಮ ತಾಯಿ ಮತ್ತು ತಂದೆಯನ್ನು ನಾನು ನೊಂದಣಿ ವಿಭಾಗ ಪತ್ರದ ಮುಖಾಂತರ ಭಾಗ ಆದ ನಂತರ ನಾನು ನನ್ನ ತಾಂದೆ ತಾಯಿಯನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿ ಸಂಖ್ಯೆ 1, 4 ಮತ್ತು 5 ರವರ ನನ್ನ ತಂದೆ ತಾಯಿಯವರ ಪೋಷಣೆಯನ್ನು ಮತ್ತು ಆರೋಗ್ಯ ಕಾಳಜಿಯನ್ನು ಮಾಡಿದ ಕಾರಣ ನನ್ನ ತಂದೆ ತಾಯಿ ಸದರಿಯವರಿಗೆ ಮರಣ ಶಾಸನ ಮುಖಾಂತರ ಅವರ ಭಾಗದ ಆಸ್ತಿಗಳನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 06.11.2006 ರಲ್ಲಿ ನನ್ನ ತಾಯಿ ಮರಣ ಶಾಸನ ಮಾಡುವ ಸಮಯದಲ್ಲಿ ವಾದಿಯು ನನ್ನನ್ನು ನಿರ್ಲಕ್ಷತನದಿಂದ ನೋಡಿದ್ದಾನೆ ಎಂದು ಬರೆದು ವಿಲ್ ನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯಲ್ಲಿ ವಾದಿಯಾದ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. 1, 4 ಮತ್ತು 5 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಈಗಿನ ಕಾಲದಲ್ಲಿ ತುಂಬಾ ಬೆಲೆಬಾಳುವ ಕಾರಣ ಸದರಿ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**